# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 865
2. ಸದಸ್ಯರ ಹೆಸರು : ಶ್ರೀ ಎಸ್. ರವಿ
3. ಉತ್ತರಿಸಬೇಕಾದ ದಿನಾಂಕ : 23.02.2023

| ಕ್ರ. ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಮೇಕೆದಾಟು ಯೋಜನೆಗೆ ಸಮಗ್ರ ಯೋಜನಾ ವರದಿಯನ್ನು ತಯಾರಿಸಲಾಗಿದೆಯೇ; ತಯಾರಿಸಿದ್ದಲ್ಲಿ, ಈ ಸಮಗ್ರ ಯೋಜನಾ ವರದಿಗೆ ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆಯಲಾಗಿದೆಯೇ; (ಸಂಪೂರ್ಣ ಮಾಹಿತಿಯನ್ನು ನೀಡುವುದು) | **1. ಮೇಕೆದಾಟು ಯೋಜನೆಯ ಡಿ.ಪಿ.ಆರ್. ಗೆ ಕೇಂದ್ರ ಜಲ ಆಯೋಗದ ತೀರುವಳಿ:**<br>• ಯೋಜನೆಯ ವಿವರವಾದ ಯೋಜನಾ ವರದಿಯನ್ನು ರೂ.9000.00 ಕೋಟಿ ಮೊತ್ತಕ್ಕೆ ತಯಾರಿಸಿ ದಿನಾಂಕ:18.01.2019 ರಂದು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿದೆ.<br>• ಕೇಂದ್ರ ಜಲ ಆಯೋಗ ದವರು ಸದರಿ ಯೋಜನೆಯ ಕುರಿತು ಅಭಿಪ್ರಾಯವನ್ನು ನೀಡುವಂತೆ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರಕ್ಕೆ (CWMA) ಕೋರಲಾಗಿದ್ದು, ಸದರಿ ವಿಷಯವು CWMA ಸಭೆಗಳಲ್ಲಿ ಹಲವಾರು ಬಾರಿ ಚರ್ಚೆಗೆ ಒಳಪಟ್ಟಿದ್ದು, ಮುಂದೂಡಲ್ಪಟ್ಟಿರುತ್ತದೆ.<br>**2. ಮೇಕೆದಾಟು ಯೋಜನೆಯ ಪರಿಸರ ಮತ್ತು ಅರಣ್ಯ ಇಲಾಖೆಯ ತೀರುವಳಿ:**<br>• ಯೋಜನೆಗೆ ಅವಶ್ಯವಿರುವ EIA (Environmental Impact Assessment) & EMP (Environmental Management Plan) ವರದಿಗಳನ್ನು ತಯಾರಿಸಲು Terms of Reference (ToR) ಅರ್ಜಿಯನ್ನು ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆಯ ಸಚಿವಾಲಯದ (MoEF & CC) ಅಂತರ್ಜಾಲದಲ್ಲಿ ದಿನಾಂಕ:20.06.2019 ರಂದು ಅಪ್‌ಲೋಡ್ ಮಾಡಲಾಗಿತ್ತು.<br>• ಅದರಂತೆ ಈ ಪ್ರಸ್ತಾವನೆಯನ್ನು ದಿನಾಂಕ:19.07.2019 ರಂದು ನಡೆದ Expert Appraisal Committee (EAC), MoEF ಸಭೆಯಲ್ಲಿ ಮಂಡಿಸಲಾಗಿ, ಸಮಿತಿಯು ಸೂಚಿಸಿರುವ ಹೆಚ್ಚುವರಿ ಮಾಹಿತಿಗಳನ್ನು ದಿನಾಂಕ:04.10.2019 ರಂದು MoEF ಅಂತರ್ಜಾಲದಲ್ಲಿ ಸಲ್ಲಿಸಲಾಗಿದೆ. |
| (ಆ) | 2022-23ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಮೇಕೆದಾಟು ಯೋಜನೆಗೆ ಎಷ್ಟು ಮೊತ್ತದ ಅನುದಾನವನ್ನು ಬಿಡುಗಡೆ ಮಾಡಲಾಗಿದೆ; ಈ | 2022-23ನೇ ಸಾಲಿನ ಆಯವ್ಯಯದಲ್ಲಿ ಮೇಕೆದಾಟು ಯೋಜನೆಗೆ ರೂ. 1000.00 ಕೋಟಿ ಅನುದಾನವನ್ನು ಘೋಷಿಸಲಾಗಿದ್ದು, ಸದರಿ ಯೋಜನೆಯ ವಿವರವಾದ ವರದಿಗೆ ಕೇಂದ್ರ ಸರ್ಕಾರದ ಅನುಮೋದನೆ ನಿರೀಕ್ಷಣೆಯಲ್ಲಿದ್ದು, ಯಾವುದೇ ವೆಚ್ಚವನ್ನು ಮಾಡಿರುವುದಿಲ್ಲ. |

| ಕ್ರ. ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| | ಯೋಜನೆಯ ಜಾರಿಗಾಗಿ ಸರ್ಕಾರವು ಇಲ್ಲಿವರೆಗೆ ಖರ್ಚು ಮಾಡಿರುವ ಅನುದಾನವೆಷ್ಟು; (ಸಂಪೂರ್ಣ ವಿವರ ನೀಡುವುದು) | ಈ ಹಿಂದೆ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಲು ಹಾಗೂ ಪರಿಸರ ಇಲಾಖೆಯ ಅನುಮತಿ ಪಡೆಯಲು ಒಟ್ಟಾರೆಯಾಗಿ ರೂ.16.11 ಕೋಟಿ ಮೊತ್ತಕ್ಕೆ ಸಮಾಲೋಚಕರಿಗೆ ಗುತ್ತಿಗೆಯನ್ನು ನೀಡಲಾಗಿದ್ದು, ಇಲ್ಲಿಯವರೆಗೆ ರೂ.10.87 ಕೋಟಿ ವೆಚ್ಚ ಮಾಡಲಾಗಿರುತ್ತದೆ. |
| (ಇ) | ಮೇಕೆದಾಟು ಯೋಜನೆಯನ್ನು ಜಾರಿಗೊಳಿಸುವಲ್ಲಿ ಸಾಕಷ್ಟು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ವಿಳಂಬಕ್ಕೆ ಕಾರಣಗಳೇನು ಮತ್ತು ಈ ಯೋಜನೆಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು? (ಸಂಪೂರ್ಣ ಮಾಹಿತಿಯನ್ನು ನೀಡುವುದು) | ಮೇಕೆದಾಟು ಯೋಜನೆಯು ಕಾವೇರಿ ಜಲವಿವಾದದ ನ್ಯಾಯಾಧೀಕರಣದ ತೀರ್ಪಿನ ಪರಿವ್ಯಾಪ್ತಿಯಲ್ಲಿದ್ದು, ಸದರಿ ಯೋಜನೆಗೆ ಇರುವ ಕಾನೂನಾತ್ಮಕ ತೊಡಕುಗಳನ್ನು ನಿವಾರಿಸಿಕೊಂಡು ಯೋಜನೆಗೆ ಕೇಂದ್ರ ಸರ್ಕಾರದ ಸಕ್ಷಮ ಪ್ರಾಧಿಕಾರಗಳ ತೀರುವಳಿಯೊಂದಿಗೆ ಅಗತ್ಯವಿರುವ ಅನುದಾನವನ್ನು ಕಲ್ಪಿಸಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು. |

***ಸಂಖ್ಯೆ: ಜಸಂಇ 21 ಎನ್‌ಎಲ್‌ಎ 2023***

**( ಗೋವಿಂದ ಎಂ. ಕಾರಜೋಳ )**
**ಜಲಸಂಪನ್ಮೂಲ ಸಚಿವರು**